# ಇದು ನೀರ್‌ದೋಸೆ ಅಲ್ಲ
# ಫ್ರೆಷ್ ತೋತಾಪುರಿ!

‘ಸಿದ್ಲಿಂಗು’, ‘ನೀರ್‌ದೋಸೆ’ ಸಿನಿಮಾಗಳಿಂದ ತಮ್ಮದೇ ‘ಟ್ರೇಡ್‌ಮಾರ್ಕ್’ ರೂಪಿಸಿಕೊಂಡಿರುವ ನಿರ್ದೇಶಕ **ವಿಜಯಪ್ರಸಾದ್** ನಿರ್ದೇಶಿಸಿರುವ ಸಿನಿಮಾಗಳು ಎರಡೇ ಆದರೂ ಪಡೆದಿರುವ ಖ್ಯಾತಿ–ಕುಖ್ಯಾತಿ ದೊಡ್ಡದು. ಈಗ ‘ನೀರ್‌ದೋಸೆ’ ತಂಡದ ಬಹುತೇಕರನ್ನೇ ಜೊತೆಗಿಟ್ಟುಕೊಂಡು ‘ತೋತಾಪುರಿ’ ಬೆಳೆದಿರುವ ಅವರು ಎರಡು ಪೀಸ್ ಮಾಡಿ, ಉಪ್ಪು ಕಾರ ಹಾಕಿ ಪ್ರೇಕ್ಷಕರ ಕೈಗಿಡಲು ಸಜ್ಜಾಗಿದ್ದಾರೆ. ಪ್ರೇಕ್ಷಕನ ನಾಲಿಗೆ ಮೇಲೆ ಇನ್ನೂ ಉಳಿದಿರುವ ‘ನೀರ್ ದೋಸೆ’ಯ ಸ್ವಾದವನ್ನು ನಿವಾಳಿಸಿ ಒಗೆಯುವ ಹಾಗೆ ಈ ತೋತಾಪುರಿಯ ರುಚಿ ಇರಲಿದೆ ಎನ್ನುವುದು ಅವರ ಬಲವಾದ ನಂಬಿಕೆ.

■ **ಪದ್ಮನಾಭ ಭಟ್**

◆ **‘ತೋತಾಪುರಿ’ ಸಿನಿಮಾ ಯಾವ ಹಂತದಲ್ಲಿದೆ?**

ಮೊದಲನೇ ಭಾಗ ಸಿದ್ಧವಾಗಿದೆ. ಸಂಕಲನ, ಡಬ್ಬಿಂಗ್ ಎಲ್ಲವೂ ಆಗಿದೆ. ಇನ್ನು ಎರಡು ಹಾಡುಗಳನ್ನು ಸೇರಿಸಿ, ರೀರೆಕಾರ್ಡಿಂಗ್ ಆದರೆ ಸಿನಿಮಾ ಬಿಡುಗಡೆಗೆ ಸಿದ್ಧವಾಗುತ್ತದೆ. ಎರಡನೇ ಭಾಗದ ಶೇ. 70ರಷ್ಟು ಚಿತ್ರೀಕರಣ, ಎಡಿಟಿಂಗ್ ಮುಗಿದಿದೆ. ಒಂದು ಮಾತಿನ ಭಾಗ ಮತ್ತು ಒಂದು ಹಾಡು, ಎರಡು ಶೆಡ್ಯೂಲ್ ಮಾತ್ರ ಬಾಕಿ ಇದೆ. ಅದಾದರೆ ಆ ಭಾಗವೂ ರೆಡಿ.

◆ **ಎರಡು ಭಾಗಗಳಲ್ಲಿನ ಸಿನಿಮಾವನ್ನು ಹೇಗೆ ಬಿಡುಗಡೆ ಮಾಡ್ತೀರಿ?**

ಮೊದಲನೇ ಭಾಗ ಬಿಡುಗಡೆ ಮಾಡಿ ನಾಲ್ಕರಿಂದ ಆರು ವಾರದ ಅಂತರದಲ್ಲಿ ಎರಡನೇ ಭಾಗ ಬಿಡುಗಡೆ ಮಾಡುವುದು ಎಂದು ಅಂದುಕೊಂಡಿದ್ದೇವೆ. ಮೊದಲನೇ ಭಾಗಕ್ಕೆ ಜನರ ಸ್ಪಂದನ ಹೇಗಿರುತ್ತದೆ ನೋಡಬೇಕು. ಅದು ಸಿನಿಮಾ ಚೆನ್ನಾಗಿ ಹೋಗ್ತಿದ್ರೆ ಇನ್ನೊಂದೆರಡು ವಾರ ಮುಂದೂಡಿ, ಎರಡು ತಿಂಗಳ ನಂತರ ಎರಡನೇ ಭಾಗ ಬಿಡುಗಡೆ ಮಾಡುತ್ತೇವೆ.

◆ **ಎರಡು ಭಾಗಗಳಲ್ಲಿ ಸಿನಿಮಾ ಮಾಡಬೇಕು ಎಂದು ಯಾಕೆ ನಿರ್ಧರಿಸಿದಿರಿ?**

ಸ್ಕ್ರಿಪ್ಟ್ ಅನ್ನು ನಿರ್ಮಾಪಕರ ಎದುರು ಓದಿದಾದಲೇ ಎರಡು ಭಾಗಗಳಲ್ಲಿ ಸಿನಿಮಾ ಮಾಡೋಣ ಎಂದು ನಿರ್ಧರಿಸಿದ್ದೆವು. ನಿರ್ಮಾಪಕರೇ ಅದನ್ನು ಹೇಳಿದರು. ಎರಡೂ ಸಿನಿಮಾಗಳ ಅವಧಿ ಎರಡು ಗಂಟೆಗಳಿರುತ್ತವೆ. ಮೊದಲನೇ ಭಾಗದ ಕೊನೆಯಲ್ಲಿ ಧನಂಜಯ್ ಪಾತ್ರದ ಪರಿಚಯ ಆಗುತ್ತದೆ. ಎರಡನೇ ಭಾಗದಲ್ಲಿ ಅವರು ಬರ್ತಾರೆ. ಎರಡನೇ ಭಾಗ ಸರಿಯಾಗಿ ಅರ್ಥ ಆಗಬೇಕು ಎಂದರೆ ಮೊದಲೇ ಭಾಗ ನೋಡಿರಲೇಬೇಕು.

◆ **ನೀರ್‌ದೋಸೆ ಹಿಟ್ ಸಿನಿಮಾ. ನಿಮಗೆ ಸಾಕಷ್ಟು ಹೆಸರನ್ನೂ ತಂದುಕೊಟ್ಟಿದೆ. ‘ತೋತಾಪುರಿ’ ಆ ಸಿನಿಮಾಗಿಂತ ಹೇಗೆ ಭಿನ್ನವಾಗಿರುತ್ತದೆ?**

‘ನೀರ್‌ದೋಸೆ’ಗೂ ‘ತೋತಾಪುರಿ’ಗೂ ಅಜಗಜಾಂತರ ವ್ಯತ್ಯಾಸ ಇದೆ. ಕಥೆ, ನಿರೂಪಣೆ ಎಲ್ಲ ವಿಚಾರದಲ್ಲಿಯೂ ವ್ಯತ್ಯಾಸವಿದೆ. ಇಂದು ಪ್ರಸ್ತುತ ಸಮಾಜವನ್ನು ಕಾಡುತ್ತಿರುವ ಜಾತಿ, ಧರ್ಮ, ಕೋಮುವಾದ ಈ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು, ಬಾಲ್ಯದಿಂದ ನಾನು ಪಡೆದುಕೊಂಡಿರುವ ಅನುಭವಗಳು, ಬದುಕನ್ನು ಬಸಿದುಕೊಂಡಿರುವ ರೀತಿ ಎಲ್ಲವನ್ನೂ ಸೇರಿಸಿ ಒಂದು ಕಥೆ ಮಾಡಿದೀನಿ. ಇದು ‘ಗಲಭೆಯಿಲ್ಲದ ಪುಟ್ಟ ಪ್ರೇಮಕಥೆ’. ಈ ಸಿನಿಮಾದಲ್ಲಿ ಗಂಭೀರ ವಿಚಾರಗಳು ತುಂಬ ಇವೆ. ಅವುಗಳ ಜೊತೆಗೆ ನನ್ನ ಮಾಮೂಲಿ ಸ್ಟೈಲ್, ಚೇಷ್ಟೆ ಮಾಡುವುದು, ಮಾತುಗಳಲ್ಲಿ ಕಚಗುಳಿ ಕೊಡುವುದೂ ಇದ್ದೇ ಇದೆ. ಮನರಂಜನೆಯ ಮೂಲಕವೇ ನಮಗೆ ಅನಿಸಿದ ಗಂಭೀರ ವಿಚಾರವನ್ನು ಹೇಳಿಕೊಂಡು ಹೋಗಿದ್ದೇವೆ. ‘ನೀರ್‌ದೋಸೆ’ಯಲ್ಲಿ ನೋಡಿದ ಜಗ್ಗೇಶ್ ಅವರಿಗೂ ಈ ಸಿನಿಮಾದಲ್ಲಿ ನೋಡುವ ಜಗ್ಗೇಶ್ ಅವರಿಗೂ ಅಷ್ಟೇ ವ್ಯತ್ಯಾಸಗಳಿವೆ.

◆ **ನೀವು ಸಿನಿಮಾದ ನಾಯಕಿಯನ್ನು ಆಯ್ದುಕೊಳ್ಳಬೇಕಾದರೆ ಹತ್ತು ಸಲ ಯೋಚನೆ ಮಾಡಿ ಆಯ್ಕೆ ಮಾಡಿಕೊಳ್ಳುತ್ತೀರಿ. ಯಾಕೆಂದರೆ ಹಿಂದಿನ ಸಿನಿಮಾಗಳಲ್ಲಿ ನಿಮಗೆ ಆಗಿರುವ ಅನುಭವ ಹಾಗಿದೆ. ಈ ಚಿತ್ರದ ನಾಯಕಿ ಆಯ್ಕೆ ಮಾಡಿಕೊಂಡಿದ್ದು ಹೇಗೆ?**

ಹ್ಹ ಹ್ಹಾ... ಕೊರೊನಾ ಬಂದ ಟೈಮಲ್ಲಿ ಕೊರೊನಾಗಿಂತ ಒಳ್ಳೆ ವೈರಸ್ ಬಿಟ್ರಿ ನೀವು. ನಮಗೆ ಆ ವಿಚಾರದಲ್ಲಿ ‘ಬಂಧನ’ ಆಗಿತ್ತು. ಈಗ ಕೊರೊನಾ ಕಾರಣಕ್ಕೆ ದಿಗ್ಬಂಧನ ಆಗಿದೆ. ನಾಯಕಿ ಅಂದತಕ್ಷಣ ವೈರಸ್ ಇರಲಿ, ಇರದೇ ಇರ್ಲಿ, ನಾವೇ ದಿಗ್ಬಂಧನ ಹಾಕ್ಕೊಳೋ ಥರ ಆಗಿಬಿಟ್ಟಿದೆ...

